

# ಕೆರೆಗಳಿಗೆ ಮರುಹುಟ್ಟು

## ಜಲಸಂರಕ್ಷಣೆಯ ಸ್ಫೂರ್ತಿಕಥನ

**ಕೆಎಎಸ್ ಅಧಿಕಾರಿಯೊಬ್ಬರ ಸ್ವಗ್ರಾಮ ಪ್ರೀತಿಯಿಂದ ಹತ್ತು ಕೆರೆಗಳು ಮರುಜೀವ ಪಡೆದುಕೊಂಡು ನಳನಳಿಸುತ್ತಿವೆ. ಸರ್ಕಾರದ ನೆರವಿಗೆ ಕಾಯದೇ, ಗ್ರಾಮಸ್ಥರ ಸಹಕಾರದೊಂದಿಗೆ ಜೀವಜಲವನ್ನು ಮರಳಿ ಪಡೆದಿರುವ ಕಥೆ ಪ್ರತಿ ಗ್ರಾಮಕ್ಕೂ ಸ್ಫೂರ್ತಿಯಾಗಬೇಕಿದೆ.**

■ ಡಿ.ಎಂ. ಕುರ್ಕೆ ಪ್ರಶಾಂತ್

ಐದು ವರ್ಷಗಳ ಹಿಂದೆ ಈ ಕೆರೆಯಂಗಳದ ಚಿತ್ರಣ ಬೇರೆಯದೇ ಆಗಿತ್ತು. ಜಾಲಿಗಿಡಗಳಿಂದ ಆವರಿಸಿ ಹೂಳು ತುಂಬಿಕೊಂಡು ಕೆರೆಯ ಚಹರೆಯನ್ನೇ ಅಳಿಸಿಹಾಕುವಂಥ ನೋಟ. ಆದರೀಗ ಇದರ ದೃಶ್ಯ ಸಂಪೂರ್ಣ ಬದಲಾಗಿದೆ. ಕೆರೆಯಲ್ಲಿ ವರ್ಷವಿಡೀ ನೀರು ದೊರಕುತ್ತಿದೆ. 76 ಎಕರೆ ವಿಸ್ತೀರ್ಣದ ಊರ ಕೆರೆ ತುಂಬಿ ತುಳುಕುತ್ತಿರುವುದು ಗ್ರಾಮಸ್ಥರಲ್ಲಿ ಹರ್ಷ ತುಂಬಿದೆ. ಅಷ್ಟೇ ಅಲ್ಲ, ಈ ಕೆರೆ ಪ್ರವಾಸಿತಾಣ ಎನ್ನುವಂತೆ ರೂಪು ಪಡೆಯುತ್ತಿದೆ ಕೂಡ.

ಗೌರಿಬಿದನೂರು ತಾಲ್ಲೂಕಿನ ಮುದುಗಾನಕುಂಟೆ ಕೆರೆಯ ಕಥೆಯಿದು. ಕಡುಬೇಸಿಗೆಯಲ್ಲೂ ತನ್ನ ಒಡಲಿನಲ್ಲಿ ನೀರು ಉಳಿಸಿಕೊಂಡಿರುವ ಈ ಕೆರೆಯ ದೃಶ್ಯ ಮಳೆಗಾಲದಲ್ಲಿ ಇನ್ನೂ ಸುಂದರ. ಅಧಿಕಾರಿಯೊಬ್ಬರ ಸ್ವಗ್ರಾಮ ಪ್ರೀತಿ ಈ ಕೆರೆಯ ಪುನರುಜ್ಜೀವನಕ್ಕೆ ಮೂಲ ಕಾರಣವಾಗಿದೆ. ಈ ಕೆರೆಯೊಂದಿಗೆ ಗೌರಿಬಿದನೂರು ತಾಲ್ಲೂಕಿನ 10 ಕೆರೆಗಳು ಅವರ ಪ್ರೀತಿಯಲ್ಲಿ ಪುನರುಜ್ಜೀವನಗೊಂಡಿವೆ. ಈಗ ಹನ್ನೊಂದನೆಯ ಕೆರೆಗೆ ಮರುಜನ್ಮ ನೀಡಲು ರೂಪುರೇಷೆಗಳು ಸಿದ್ಧವಾಗುತ್ತಿವೆ.

ಕೆಎಎಸ್ ಅಧಿಕಾರಿ ವರಪ್ರಸಾದ್ ರೆಡ್ಡಿ ಗೌರಿಬಿದನೂರು ತಾಲ್ಲೂಕಿನ ಹುಣಸೇನಹಳ್ಳಿ ಗ್ರಾಮದವರು. ಬರದ ಹಣೆಪಟ್ಟಿಯ ತಮ್ಮ ತಾಲ್ಲೂಕಿನ ಕೆರೆಗಳಲ್ಲಿ ನೀರು ಮೈದುಂಬಬೇಕು ಎನ್ನುವ ಅವರ ಹಂಬಲ, ಆಸಕ್ತಿಯ ಫಲವಾಗಿ ಕೆರೆಗಳ ಕಾಯಕಲ್ಪ ಕಾರ್ಯ 2020ರಿಂದ ಸಾಗುತ್ತಿದೆ. 'ಗೌರಿಬಿದನೂರು ಸೇವಾ ಪ್ರತಿಷ್ಠಾನ'ದ ಮೂಲಕ ನಡೆಯುತ್ತಿರುವ ಈ ಕಾರ್ಯಕ್ಕೆ ಸರ್ಕಾರದಿಂದ ನೆರವು ನಿರೀಕ್ಷಿಸಿಲ್ಲ. ಆಯಾ ಕೆರೆಗಳು ಮತ್ತು ಸುತ್ತಲಿನ ಗ್ರಾಮಗಳ ಜನರ ಸಹಕಾರವೇ ಸಂಪನ್ಮೂಲ ಮತ್ತು ಬಲ. ಪುನರುಜ್ಜೀವನಗೊಂಡಿರುವ ಕೆರೆಗಳಲ್ಲಿ ಬಹುತೇಕವು ದೊಡ್ಡ ಕೆರೆಗಳೇ ಆಗಿದ್ದು, ಬರಿದಾಗಿದ್ದ ಕೆರೆಗಳಲ್ಲಿ ಈಗ ಜೀವಜಲ ಮೈದುಂಬಿದೆ.

### ಮೊದಲ ಹೆಜ್ಜೆಯ ಯಶಸ್ಸು

ಮುದುಗಾನಕುಂಟೆ ಗಂಗಾ ಭಾಗೀರಥಿ ಕ್ಷೇತ್ರವು ಪ್ರಸಿದ್ಧ ಧಾರ್ಮಿಕ ಸ್ಥಳ. ಈ ಕ್ಷೇತ್ರಕ್ಕೆ



ವರಪ್ರಸಾದ್ ರೆಡ್ಡಿ

ಹೊಂದಿಕೊಂಡಂತೆಯೇ ಮುದುಗಾನಕುಂಟೆ ಕೆರೆ ಇದೆ. 2020ರಲ್ಲಿ ವರಪ್ರಸಾದ್ ರೆಡ್ಡಿ ಈ ಕೆರೆ ಪುನರುಜ್ಜೀವನಕ್ಕೆ ಆಲೋಚಿಸಿದರು. ಆಗ ಅವರ ಎದುರು ದೊಡ್ಡ ಸವಾಲುಗಳೇ ಇದ್ದವು.

'ಈ ಕ್ಷೇತ್ರದಿಂದ ಹೊರಗೆ ಏನನ್ನೂ ತೆಗೆದುಕೊಂಡು ಹೋಗಬಾರದು' ಎನ್ನುವ ಧಾರ್ಮಿಕ ನಂಬಿಕೆ ಒಂದೆಡೆಯಾದರೆ, 'ಇಷ್ಟು ದೊಡ್ಡ ಕೆರೆಯನ್ನು ಸರ್ಕಾರದಿಂದ ಹಣ ಪಡೆಯದೆ ನವೀಕರಣ ಮಾಡಲು ಸಾಧ್ಯವೇ' ಎನ್ನುವ ಹೀಗಳೆಯುವ ಮಾತು.

ಇವುಗಳ ನಡುವೆಯೇ ಗ್ರಾಮಸ್ಥರನ್ನು ವಿಶ್ವಾಸಕ್ಕೆ ಪಡೆದು 2020ರ ಜ.1ರ ಹೊಸ ವರ್ಷದ ದಿನವೇ ಮುದುಗಾನಕುಂಟೆ ಕೆರೆ ಅಭಿವೃದ್ಧಿಗೆ ಚಾಲನೆ ನೀಡಲಾಯಿತು. 76 ಎಕರೆಯ ಕೆರೆಯನ್ನು ನವೀಕರಿಸಲು 84 ದಿನಗಳ ಕೆಲಸ ಮಾಡಲಾಯಿತು. ಕೆರೆಯ ಸುತ್ತ ವಿವಿಧ ಜಾತಿಯ ಗಿಡಗಳನ್ನು ನೆಡಲಾಯಿತು. ಕೆರೆಯ ನಡುವೆ ಪಕ್ಷಿಗಳ ಪಾಲನೆ ಪೋಷಣೆಗೆ 80x80 ವಿಸ್ತೀರ್ಣದಲ್ಲಿ ಕೃತಕ ದ್ವೀಪ ನಿರ್ಮಿಸಲಾಯಿತು. ದೊಡ್ಡ ಇಂಗುಗುಂಡಿಗಳನ್ನು ನಿರ್ಮಾಣ ಮಾಡಲಾಯಿತು. ಕೆರೆ ಸಂಪರ್ಕಿಸುವ 2.5 ಕಿ.ಮೀ ಉದ್ದದ ಮೂರು ರಾಜಕಾಲುವೆಗಳನ್ನು ಸ್ವಚ್ಛಗೊಳಿಸಲಾಯಿತು. ಈ ಕಾರ್ಯ ಮುಗಿದಿದ್ದು ಮುಂಗಾರು ಮಳೆ ಆರಂಭಕ್ಕೂ ಮುನ್ನ.

ಮುಂಗಾರು ಮಳೆ ಆರಂಭವಾಗುತ್ತಿದ್ದಂತೆಯೇ ಕೆರೆ ಪುನರುಜ್ಜೀವನಕ್ಕೆ ಕನ್ನಡಿ ಹಿಡಿಯಿತು. ನೀರು ತುಂಬಿ ತಿಂಗಳುಗಟ್ಟಲೆ ಕೋಡಿ ಹರಿಯಿತು. ಗ್ರಾಮಸ್ಥರ ಕಣ್ಣರಳಿಸುವಂತೆ ಮಾಡಿತು. ಪುನರುಜ್ಜೀವನದ ನಂತರ ಕೆರೆಯಲ್ಲಿ ತುಂಬಿದ ನೀರು ಕಣ್ಮರೆ ಆಗಿಲ್ಲ. ಮುದುಗಾನಕುಂಟೆ ಕೆರೆಯ ನವೀಕರಣದ ಯಶಸ್ಸು ಗೌರಿಬಿದನೂರು